ಅದನ್ನೂ ನಿನಗೆ ಕೊಡುತ್ತೇನೆ’’ ಎಂದರು. ಅದೇ ಪೆಟ್ಟಿಗೆಯಿಂದ, ಹಿಂದಿನಂತೆ ಕಾಗದದಲ್ಲಿ ಸುತ್ತಿ ಇಟ್ಟಿದ್ದ ಹಾಗೂ ಬಟ್ಟೆಯ ಜೊತೆಗೆ ಕಟ್ಟು ಹಾಕಿಸಿದ್ದ ಸ್ವಾಮೀಜಿಯವರ ಒಂದು ಭಾವಚಿತ್ರವನ್ನು ಶ್ರೀಮಾತೆ ಹೊರಗೆ ತೆಗೆದರು. ಶ್ರೀಮಾತೆ ನಮ್ಮ ಬಳಿ ಕುಳಿತು ಅದೆಷ್ಟೋ ಮಾತನಾಡಿದರು: ‘‘ಶ್ರೀರಾಮಕೃಷ್ಣರು ಹೇಳುತ್ತಿದ್ದರು, ದೀಪದ ಕೆಳಗೆ ಕತ್ತಲು ಅಂತ. ಎಷ್ಟೋ ದೇಶ ವಿದೇಶಗಳ ಜನರು ಠಾಕೂರರ ಮಾತುಗಳನ್ನು ಅರ್ಥ ಮಾಡಿಕೊಂಡರು. ಆದರೆ ಈ ಪ್ರದೇಶದ ಜನರು ಯಾರೂ ಅರಿತುಕೊಳ್ಳಲಿಲ್ಲ. ನಿನ್ನ ಮೂಲಕ ಈ ಪ್ರದೇಶದ ಅನೇಕ ಮಂದಿ ಠಾಕೂರರ ಮಾತುಗಳನ್ನು ಅರಿತುಕೊಳ್ಳುವರು.’’

### ೨. ಸ್ವಾಮಿ ಕೈವಲ್ಯಾನಂದ

ಜಯರಾಮಬಾಟಿಯಲ್ಲಿ ಒಬ್ಬ ಮುದುಕನಿದ್ದ, ಬಹುಶಃ ಕೆಳಜಾತಿಯವನಿರಬೇಕು. ಕೈಯಲ್ಲಿ ಒಂದು ಕುಂಬಳಕಾಯಿ ಎಲೆಯನ್ನು ಹಿಡಿದುಕೊಂಡು ಅನ್ನಸಂತರ್ಪಣೆಗಾಗಿ ಬಂದಿದ್ದ. ಅವನನ್ನು ನೋಡಿ ಶ್ರೀಮಾತೆಯವರು, ‘‘ಬಾ, ಬಾ’’ ಎನ್ನುತ್ತ ತಮ್ಮೆರಡೂ ಕಾಲುಗಳನ್ನು ಹಿಂದಕ್ಕೆ ಸರಿಸಿ ನಿಂತರು. ಶ್ರೀಮಾತೆಯವರು ನಿಂತಿದ್ದ ಸ್ಥಳದಲ್ಲಿದ್ದ ಧೂಳನ್ನು ಅವನು ಎಲೆಗೆ ಹಾಕಿಕೊಂಡು, ಸ್ವಲ್ಪ ಧೂಳನ್ನು ತಲೆ, ಮುಖ, ಎದೆಗೆ ಹಾಕಿಕೊಂಡು ಹೊರಟುಹೋದ. ಶ್ರೀಮಾತೆ ಹೇಳಿದರು: ‘‘ಅವನು ಇದೇ ರೀತಿ (ಪ್ರತಿ) ದಿನವೂ ಬಂದು ಅದನ್ನು ತೆಗೆದುಕೊಂಡು ಹೋಗುತ್ತಾನೆ.’’

### ೩. ಸ್ವಾಮಿ ಗಿರಿಜಾನಂದ

ಶ್ರೀರಾಮಕೃಷ್ಣ ಪೂಜೆಯಾದ ಮೇಲೆ ಶ್ರೀಮಾತೆಯವರು ನಮಗೆ ಮೂವರಿಗೆ [೧] ತಮ್ಮ ಕೈಯಿಂದಲೇ ಕಾವಿ ಬಣ್ಣದ ಉತ್ತರೀಯ ಹಾಗೂ ಕೌಪೀನಗಳನ್ನು ನೀಡಿದರು. ಶ್ರೀರಾಮಕೃಷ್ಣರಿಗೆ ಹೀಗೆ ಪ್ರಾರ್ಥಿಸಿದರು. ‘‘ಠಾಕೂರ್, ಇವರುಗಳ ಸಂನ್ಯಾಸದ ರಕ್ಷಣೆ ಮಾಡಿ. ಗಿರಿಪರ್ವತಗಳಲ್ಲಾಗಲಿ, ವನ-ಅರಣ್ಯಗಳಲ್ಲಾಗಿ ಎಲ್ಲಿದ್ದರೂ ಸರಿ, ಅವರಿಗೆ ಎರಡು ಹೊತ್ತು ಆಹಾರ ಸಿಗುವಂತೆ ಮಾಡಿ.’’ ನಮಗೆ ಹೇಳಿದರು, ‘‘ಶ್ರಾದ್ಧ ಮುಂತಾದ ಕ್ರಿಯೆಗಳಿಗೆ ಇನ್ನು ಮುಂದೆ ನಿಮಗೆ ಅಧಿಕಾರ ಇರುವುದಿಲ್ಲ. ಇನ್ನು ಮೇಲೆ ನೀವು ಎಲ್ಲರ ಅನ್ನವನ್ನು ತಿನ್ನಬಲ್ಲಿರಿ. ಕೆಳವರ್ಗದ ಬಾಗ್ದಿ ಜಾತಿಯ ಹೆಣ್ಣುಮಕ್ಕಳು ಬಂದು ಭಿಕ್ಷೆ ನೀಡಿದರೂ, ಅನ್ನಪೂರ್ಣ ಮಾತೆಯೇ ಕೊಡುತ್ತಾಳೆ ಎಂದು ಭಾವಿಸಿ ಅದನ್ನು ತಿನ್ನಬೇಕು.’’

### ೪. ಸ್ವಾಮಿ ತನ್ಮಯಾನಂದ

ಸಂನ್ಯಾಸ ಸ್ವೀಕಾರ ಮಾಡಬೇಕೆಂಬ ಮನಸ್ಸಿನಿಂದ ನಾನು ಜಯರಾಮಬಾಟಿಗೆ ಹೋಗಿದ್ದೆ. ಶ್ರೀಮಾತೆ ಹೇಳಿದರು: ‘‘ನಾಳೆ ಬೆಳಿಗ್ಗೆ ಬಾ. ಬಟ್ಟೆ, ಕೌಪೀನಗಳಿಗೆ ಕಾವಿ ಬಣ್ಣ ಹಾಕಿ, ತಲೆ ಬೋಳಿಸಿ ಬರಬೇಕು. ಜುಟ್ಟು ಇಡಬೇಕಿಲ್ಲ-ಎಲ್ಲವನ್ನೂ ಬೋಳಿಸಬೇಕು.’’(ಮರುದಿನ ಸಂನ್ಯಾಸಿ ನೀಡುವಾಗ) ನನ್ನ ಕೈಗೆ ನೀರು ಕೊಟ್ಟು ಆಚಮನ ಮಾಡಲು ಹೇಳಿದರು, ಬಳಿಕ ಮಂತ್ರ ಹೇಳತೊಡಗಿದರು. ಬಳಿಕ ನನ್ನ ತಲೆಯ ಮೇಲಿನ ಬ್ರಹ್ಮರಂಧ್ರದಲ್ಲಿ ಏನೋ ಬರೆದು, ಹೂವಿನಿಂದ ಆ ಜಾಗಕ್ಕೆ ಪೂಜೆ ಮಾಡುತ್ತ ನೀರನ್ನು ಪ್ರೋಕ್ಷಿಸತೊಡಗಿದರು. ನನ್ನ ಕೈಗೆ ಕಾವಿಬಟ್ಟೆ ನೀಡುತ್ತ ಹೇಳಿದರು: ‘‘ಇದನ್ನು ತಲೆಯ ಮೇಲಿಟ್ಟುಕೊಂಡು ಹೊರಗೆ ಹೋಗಿ, ಮತ್ತೆ ಬಾ.’’

### ೫. ಸ್ವಾಮಿ ವಿಶ್ವೇಶ್ವರಾನಂದ

ನಾನು ಶ್ರೀಮಾತೆಯವರೊಂದಿಗೆ ಈ ರೀತಿ ಮಾತುಕತೆ ನಡೆಸಿದೆ: ‘‘ಇಷ್ಟೊಂದು ಜಪತಪಗಳನ್ನು ಮಾಡುತ್ತಿದ್ದೇನೆ, ಆದರೆ ನನಗೆ ಏನೂ ಗೊತ್ತಾಗುತ್ತಿಲ್ಲ ಏಕೆ? ಅಮ್ಮಾ, ನೀವು ಧ್ಯಾನ ಮಾಡಿ ನೋಡಿ, ಏಕೆ ಏನೂ ಆಗುತ್ತಿಲ್ಲ ಅಂತ?’’ ‘‘ನೋಡು, ನನ್ನ ದೇಹಾರೋಗ್ಯ ಸ್ವಲ್ಪವೂ ಚೆನ್ನಾಗಿಲ್ಲ.’’ ‘‘ಅದೆಲ್ಲ ನಡೆಯದು. ನೀವು ನೋಡಲೇಬೇಕು.’’. ‘‘ಸರಿಯಪ್ಪ.’’ ಮರುದಿನ ಶ್ರೀಮಾತೆಯವರು ಹೇಳಿದರು, ‘‘ನಾನು ಕೆಲವು ದಿನಗಳಿಂದ ನೋಡುತ್ತಿದ್ದೇನೆ, ನೀನು ತುಂಬ ಉನ್ನತವಾದ ಅವಸ್ಥೆಯಲ್ಲಿದ್ದೀಯೆ. ಜಗನ್ಮಾತೆ ನಿನ್ನನ್ನು ತನ್ನ ಮಡಿಲಲೇ ಕುಳ್ಳಿರಿಸಿಕೊಂಡಿದ್ದಾಳೆ.’’ ‘‘ಆದರೆ ನನಗೆ ಅದೊಂದೂ ಅರ್ಥವಾಗುತ್ತಿಲ್ಲ, ಏಕೆ?’’–‘‘ಅಂದರೆ, ಸ್ವಲ್ಪ ಕರ್ಮ ಉಳಿದಿದೆ ಅಂತ ಅನ್ನಿಸುತ್ತದೆ’’

### ೬. ಸ್ವಾಮಿ ಸತ್ಸಂಗಾನಂದ

ನವಾಸನದಿಂದ ಗೋಪೇಶ್ ಹಾಗೂ ವಿನೋದ್ ಹಾಲು ತರುತ್ತಿದ್ದರು. ಆ ಹಾಲು ಕೆಟ್ಟಿರುವಂತೆ ಕಂಡುಬಂತು. ಈಗೇನು ಮಾಡಲಿ? ಶ್ರೀಮಾತೆಯವರು ಸ್ವಲ್ಪ ಹೊತ್ತಾದ ಮೇಲೆ ಹೇಳಿದರು, ‘‘ಹಾಲು ಅಶುದ್ಧವಾಗದು. ಅದಲ್ಲದೆ, ಹಣಕೊಟ್ಟು ವಸ್ತುವನ್ನು ಕೊಂಡುಕೊಂಡರೆ ಅದು ಶುದ್ಧವಾಗುವುದು.’’

ಜಗದ್ಧಾತ್ರೀ ಪೂಜೆಯ ಸಮಯದಲ್ಲಿ ಒಬ್ಬ ಎಲೆಗಳನ್ನು ಮಾರುತ್ತ ಬಂದಿದ್ದ. ಶ್ರೀಮಾತೆಯವರು ತುಸು ಚೌಕಾಶಿ ಮಾಡಿ ಕೆಲವು ಎಲೆಗಳನ್ನು ಕೊಂಡುಕೊಂಡು ಹೇಳಿದರು: ‘‘ಕೊಸರು ಇಲ್ಲವೆ? ’’ ನಂತರ ಆತನ ಕಡೆಗೆ ನೋಡಿ, ‘‘ಇರಲಿ, ಬೇಕಾಗಿಲ್ಲ ಬಿಡು’’ ಎಂದರು.

### ೭. ಸ್ವಾಮಿ ಮಹಾದೇವಾನಂದ

ಅನೇಕ ಬಾರಿ ನಾನು ನೋಡಿದ್ದೇನೆ, ಶ್ರೀಮಾತೆಯವರು ಶ್ರೀರಾಮಕೃಷ್ಣರ ಭಾವಚಿತ್ರವನ್ನು (ಸಿಂಹಾಸನದಿಂದ) ಕೆಳಕ್ಕೆ ಇಳಿಸಿ, ಪೂಜೆ ಮಾಡಿದ ಬಳಿಕ ಅದನ್ನು ಚುಂಬಿಸುತ್ತ, ಮತ್ತೆ ಮೇಲೆ ತೆಗೆದಿರಿಸುತ್ತಿದ್ದರು.

### ೮. ಅಮೂಲ್ಯ ಘೋಷ್

೧೯೦೬ನೇ ವರ್ಷದ ಚೈತ್ರ ಮಾಸವದು. ಪ್ರವೇಶಿಕಾ ಪರೀಕ್ಷೆಯ ನಂತರ ನಾನು, ಬೋಶಿ ಸೇನ್, ಜ್ಯೋತಿಶ್ಚಂದ್ರ

---

[೧] ಸ್ವಾಮಿ ಗಿರಿಜಾನಂದ, ಸ್ವಾಮಿ ವಿಶುದ್ಧಾನಂದ ಹಾಗೂ ಸ್ವಾಮಿ ಶಾಂತಾನಂದ.